ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1.

ಸಂಖ್ಯೆ:ಸಿ4(1)ಟಿ.ಜಿ.ಟಿ.ಶಿ.ಮಾ/01/2019-20 ದಿನಾಂಕ:05/08/2019

:ಜ್ಞಾಪನಾ:

ವಿಷಯ: ಕೋರಿಕೆ ವರ್ಗಾವಣೆಯಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗುವ ಟಿ.ಜಿ.ಟಿ ಶಿಕ್ಷಕರಿಗೆ 'ಎ' ವಲಯದಲ್ಲಿ ಖಾಲಿ ಡೀಮ್ಡ್ ಹುದ್ದೆಗಳನ್ನು ನೀಡದಿರುವ ಬಗ್ಗೆ.

-----****-----

ಈಗಾಗಲೇ 2018-19ನೇ ಸಾಲಿನ ವರ್ಗಾವಣೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. ಈ ವರ್ಗಾವಣೆ ಪ್ರಕ್ರಿಯೆಯಲ್ಲಿ ಟಿ.ಜಿ.ಟಿ ಶಿಕ್ಷಕರುಗಳಿಗೆ ಕೂಡ ಪ್ರೌಢ ಶಾಲೆಗಳ ಸಹ ಶಿಕ್ಷಕರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಆದರೆ ಟಿ.ಜಿ.ಟಿ ಶಿಕ್ಷಕರುಗಳಿಗೆ 'ಎ' ವಲಯದ ಡೀಮ್ಡ್ ಖಾಲಿ ಹುದ್ದೆಗಳನ್ನು ನೀಡಿದ್ದಲ್ಲಿ ಕಡ್ಡಾಯ ವರ್ಗಾವಣೆಯಾಗುವ ಶಿಕ್ಷಕರುಗಳಿಗೆ ಖಾಲಿ ಹುದ್ದೆಯ ಕೊರತೆ ಉಂಟಾಗುತ್ತದೆ. ಆದ್ದರಿಂದ ಟಿ.ಜಿ.ಟಿ ಶಿಕ್ಷಕರುಗಳಿಗೆ 'ಎ' ವಲಯದ ಡೀಮ್ಡ್ ಖಾಲಿ ಹುದ್ದೆಗಳನ್ನು ನೀಡದಿರಲು ಎಲ್ಲಾ ಪ್ರೌಢಶಾಲಾ ಶಿಕ್ಷಕರ ವರ್ಗಾವಣಾ ಪ್ರಾಧಿಕಾರಿಗಳಿಗೆ ತಿಳಿಸಿದೆ.

' ಎ ' ವಲಯದ ಡೀಮ್ಡ್ ಖಾಲಿ ಹುದ್ದೆಗಳನ್ನು ಹೊರತುಪಡಿಸಿ ಇತರೆ ಖಾಲಿ ಹುದ್ದೆಗಳನ್ನು ಜೇಷ್ಠತೆಯ ಆಧಾರದ ಮೇಲೆ ಟಿ.ಜಿ.ಟಿ ಶಿಕ್ಷಕರುಗಳಿಗೆ ನೀಡಬಹುದಾಗಿದೆ ಎಂದು ಸಹ ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ರವರಿಗೆ,

1) ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರು ಹಾಗೂ ಮೈಸೂರು ರವರಿಗೆ ಅಗತ್ಯ ಕ್ರಮಕ್ಕಾಗಿ
2) ಸಹನಿರ್ದೇಶಕರು ಹಾಗೂ ವರ್ಗಾವಣೆ ಪ್ರಾಧಿಕಾರಿಗಳಿಗೆ ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ ಧಾರವಾಡ ಮತ್ತು ಕಲಬುರಗಿ ರವರಿಗೆ ಅಗತ್ಯ ಕ್ರಮಕ್ಕಾಗಿ